<u>ಸಾಕ್ಷಿಯನ್ನು ಇಂದು ದಿನಾಂಕಃ **25/05/2023** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಸಾಕ್ಷಿಯ ಮುಖ್ಯ ವಿಚಾರಣೆ: ಫಿರ್ಯಾದಿ ಪರ ಶ್ರೀ: ಎಸ್.ವಿ.ಎಸ್. ವಕೀಲರಿಂದ:</u>

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ. ಅದರಲ್ಲಿರುವ ಎಲ್ಲಾ ವಿಷಯಗಳು ನಿಜ ಇರುತ್ತವೆ. ನಾನು ಈ ಕೆಳಕಂಡ ದಾಖಲೆಗಳ ದೃಢೀಕೃತ ನಕಲುಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಷಾನೆಗೊಳಿಸುವಂತೆ ಕೋರುತ್ತೇನೆ.

1. ದಿಃ 04/05/2021 ರೂ. 1,00,000/- ಕ್ಕೆ ಸಂಬಂದಿಸಿದಂತೆ ಎಸ್.ಬಿ.ಐ. ಬೀದರ ಶಾಖೆಯ ಚೆಕ್ ಸಂಖ್ಯೆ - 382627 ರ ಮೂಲ ಚೆಕನ್ನು ನಿಪಿ-1 ಎಂದು ಗುರ್ತಿಸಲಾಯಿತು, ಆರೋಪಿ ಸಹಿಯನ್ನು <u>ನಿಪಿ-**1** ಎ, ಎಂದು</u> ಗುರ್ತಿಸಲಾಯಿತು.

2. ಹಿಂಬರಹವನ್ನು <u>ನಿಪಿ-**2** ಎಂದು</u> ಗುರುತಿಸಲಾಯಿತು.

3. ಆರೋಪಿಗೆ ವಕೀಲರ ಮುಖಾಂತರ ನೀಡಿರುವ ನೊಟಿಸಿನ ಕಚೇರಿಯ ಪ್ರತಿಯನ್ನು <u>ನಿಪಿ-**3** ಎಂದು</u> ಗುರ್ತಿಸಲಾಯಿತು.

4. ಅಂಚೇ ರಸೀದಿಯನ್ನು <u>ನಿಪಿ-**4** ಎಂದು</u> ಗುರ್ತಿಸಲಾಯಿತು.

5. Addressy Refused ಎಂಬ ಹಿಂಬರಹದೊಂದಿಗೆ ಜಾರಿಯಾಗದೇ ಬಂದ ಅಂಚೆ ಲಕೋಟೆಯನ್ನು <u>ನಿಪಿ-**5** ಎಂದು</u>, ತೆರೆದ ನ್ಯಾಯಾಲಯದಲ್ಲಿ ಮೂಲ ನೋಟಿಸನ್ನು <u>ನಿಪಿ-**5** ಎ,</u> ಎಂದು ಗುರ್ತಿಸಲಾಯಿತು.

ಆದ್ದರಿಂದ ದೂರಿನಲ್ಲಿ ಕೋರಿಕೊಂಡಂತೆ ಆದೇಶ ಮಾಡಲು ಪ್ರಾರ್ಥನೆ.

ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.

**CC 576/2023. PW-1.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇದೆ.)**

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ.ಎಫ.ಸಿ ನ್ಯಾಯಾಲಯ ಬೀದರ

**CC 576/2023. PW-1.**

<u>ಸಾಕ್ಷಿಯನ್ನು ಇಂದು ದಿನಾಂಕಃ **08/08/2023** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀ ಸವಾಲು: ಫಿರ್ಯಾದಿ ಪರ ಶ್ರೀ: ಜಹಾಂಗೀರ ಎಂ. ವಕೀಲರಿಂದ:</u>

2. ಆರೋಪಿಗೆ ಹಣ ಕೊಟ್ಟ ಬಗ್ಗೆ ಅಗ್ರಿಮೆಂಟ್ ಬರೆಸಿಕೊಂಡಿದ್ದೀರಾ ಎಂದರೆ ಇಲ್ಲ. ಈ ನ್ಯಾಯಾಲಯದಲ್ಲಿ ಆರೋಪಿ ವಿರುದ್ಧ ಮತ್ತೊಂದು ಚೆಕ್ ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿ. ನಿಪಿ-1ರ ಚೆಕ್ ನಂಬರ ನೆನಪಿದೆಯೇ ಎಂದರೆ ಇಲ್ಲ. ಚೆಕ್ ಕೊಟ್ಟ ದಿನಾಂಕ, ಹಾಗೂ ಹಣ ಕೊಟ್ಟ ದಿನಾಂಕ ನೆನಪಿದೆಯೇ ಎಂದರೆ ಸಾಕ್ಷಿ 2-ವರ್ಷ ವರ್ಷವಾಯಿತು ನೆನಪಿಲ್ಲ ಎಂದು ನುಡಿಯುತ್ತಾರೆ. ಆರೋಪಿಗೆ ನಾನು ರೂ.1 ಲಕ್ಷ ಹಣ ಸಾಲ ಕೊಟ್ಟಿದ್ದೇನೆ. ಆರೋಪಿಗೆ ನಾನು ರೂ. 1 ಲಕ್ಷ ಹಣಕ್ಕೆ ಚೆಕ್ ಪಡೆದಿದ್ದೇನೆ.

3. ಲೀಗಲ್ ನೋಟಿಸ್ ನಲ್ಲಿ ಆರೋಪಿ ವಿಳಾಸ ಸರಿಯಾಗಿ ನಮೂದಿಸಿದ್ದೀರಾ ಎಂದರೆ ನಮೂದಿಸಿದ್ದೇನೆ. ನಿಪಿ-5ರಲ್ಲಿ ಆರೋಪಿ ಮನೆ ನಂಬರ್ ಇದೆಯೇ ಎಂದರೆ ಇಲ್ಲ. ಮನೆ ನಂಬರ್ ಬರೆಯದ ಕಾರಣ ನೋಟಿಸ್ ಆರೋಪಿಗೆ ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಚೆಕ್ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಶಕೀಲ್ ಅಹಮ್ಮದ ಅವರ ಮೂಲಕ ನನಗೆ ಆರೋಪಿ ಪರಿಚಯ. ಆರೋಪಿಗೂ ನಿಪಿ-1ರ ಚೆಕ್ ಗೂ ಸಂಬಂಧವಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಮರು ವಿಚಾರಣೆ ಇರುವುದಿಲ್ಲ)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).

**(ಓ.ಹೇ.ಕೇ.ಸ.ಇದೆ.)**

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ.ಎಫ.ಸಿ ನ್ಯಾಯಾಲಯ ಬೀದರ